# ಸಂತ ನಾಮದೇವರು

ಎನ್. ಗೋಪಿನಾಥ

*ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಿದ್ದರು: "ಭಕ್ತಿ ಜ್ಞಾನದಲ್ಲಿ, ಜ್ಞಾನ ಭಕ್ತಿಯಲ್ಲಿ ಕೊನೆಗಾಣುವುದು; ಶುದ್ಧ ಭಕ್ತಿ, ಶುದ್ಧ ಜ್ಞಾನ ಎರಡೂ ಒಂದೇ. ಎರಡರ ಗುರಿಯೂ ಒಂದೇ." ಈ ವಿಷಯವನ್ನು ತನ್ನ ೧೩ನೆ ಶತಮಾನದ ಭಕ್ತನಿಗೆ ಮನವರಿಕೆ ಮಾಡಿಕೊಡಲು, ಸ್ವಯಂ ಭಗವಂತನೇ ಹೇಗೆ ಶ್ರಮಿಸಿದನೆಂಬುದರ ದೀರ್ಘ ವಿವರಣೆಯೇ ಮಹಾರಾಷ್ಟ್ರದ ಸಂತ ನಾಮದೇವರ ದಿವ್ಯಚರಿತ್ರೆ. ಇದರ ಕಿರುನೋಟವನ್ನು ನಮಗೆ ದೊರಕಿಸಿಕೊಟ್ಟಿರುವ ಶ್ರೀ ಗೋಪಿನಾಥ ಅವರು ಶಿವಮೊಗ್ಗ ನಿವಾಸಿಗಳು ಮತ್ತು ಆಶ್ರಮದ ಭಕ್ತರು.*

ನಾಮದೇವರು ಕ್ರಿ.ಶ. ೧೨೭೦ರಲ್ಲಿ ಕಾರ್ತೀಕ ಶುಕ್ಲ ಏಕಾದಶಿಯಂದು(ಭಾನುವಾರ) ಜನ್ಮತಾಳಿದರು. ನರಸಿಂಹಪುರದಲ್ಲಿ ದರ್ಜಿವೃತ್ತಿಯಲ್ಲಿದ್ದ ಅವರ ತಂದೆ ದಾಮಾ ಶೇಟಿ (ದಾಮಾಜಿ); ತಾಯಿ ಗೊಣ್ಣಾಯಿ ಬಾಯಿ. ಒಬ್ಬ ಜ್ಯೋತಿಷಿ ನಾಮದೇವರು ಒಂದು ನೂರು ಕೋಟಿ ಅಭಂಗಗಳನ್ನು ರಚಿಸುವರೆಂದು ಭವಿಷ್ಯ ನುಡಿದಿದ್ದನು. ಬಾಲ್ಯದಲ್ಲಿಯೇ ಅವರಲ್ಲಿ ಅದ್ಭುತ ಅಧ್ಯಾತ್ಮ ಸಂಸ್ಕಾರಗಳು ಪ್ರಕಟಗೊಳ್ಳುತ್ತಿದ್ದವು. ಪಂಢರಾಪುರದ ಮನೆಗಳಲ್ಲಿ ಆಗ ಪ್ರಚಲಿತವಿದ್ದ ಪದ್ಧತಿಯಂತೆ, ಮಾಡಿದ ಅಡುಗೆಯ ಸ್ವಲ್ಪ ಭಾಗವನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ, ದೇವರಿಗೆ ನೈವೇದ್ಯ ಮಾಡಿ, ನಂತರ ವಾಪಸು ತಂದು ಎಲ್ಲರಿಗೂ ಬಡಿಸುತ್ತಿದ್ದರು.

ಒಮ್ಮೆ, ದಾಮಾಜಿ ಊರಿನಲ್ಲಿರದಿರಲು ತಾಯಿಯು ಬಾಲಕ ನಾಮದೇವರಿಗೆ, ನೈವೇದ್ಯ ಅರ್ಪಿಸಿ ಬರಲು ತಿಳಿಸಿದಳು. ಪುಟ್ಟ ಬಾಲಕನಿಗೆ ಹೇಗೆ ನೈವೇದ್ಯ ಮಾಡಬೇಕೆಂದು ಇನ್ನೂ ತಿಳಿಯದಿದ್ದರೂ ಆತ ಹೃದಯಪೂರ್ವಕವಾಗಿ ನೈವೇದ್ಯ ಮಾಡಿ ಪ್ರಾರ್ಥಿಸಿದ: "ದೇವರೆ, ನೀನು ಇದನ್ನು ಸ್ವೀಕರಿಸುವಿಯೆಂಬ ಪೂರ್ಣಶ್ರದ್ಧೆಯಿಂದ ಅರ್ಪಿಸಿದ್ದೇನೆ. ಏನೇ ಬರಲಿ, ನೀನಿದನ್ನು ತಿನ್ನುವತನಕ ನಾನಿಲ್ಲಿಂದ ಕದಲಲಾರೆ." ನಾಮದೇವರ ಆರಾಧ್ಯ ದೈವ ಪಾಂಡುರಂಗ ವಿಠಲ ಪ್ರತ್ಯಕ್ಷನಾಗಿ, ನೈವೇದ್ಯವನ್ನು ಒಂದು ಅಗಳೂ ಬಿಡದಂತೆ ತಿಂದನಂತೆ! ಮರುದಿನ ನಾಮದೇವರು ತಂದೆಯೊಂದಿಗೆ ಬಂದು ನೈವೇದ್ಯ ಅರ್ಪಿಸಿದಾಗ, ಯಥಾಪ್ರಕಾರ ಭಗವಂತ ತಿಂದುದನ್ನು ನೋಡಿದರು; ಆದರೆ ತಂದೆಗೆ ಕಾಣಲಿಲ್ಲ. ಅವರಿಗೂ ದರ್ಶನ ನೀಡಲು ನಾಮದೇವರು ಪ್ರಾರ್ಥಿಸಿದಾಗ, ತಂದೆಗೆ ವಿಠಲನ ದರ್ಶನವಾಯಿತು. ಇಂತಹ ಸುಪುತ್ರನಿಂದಾಗಿ ತಮಗೆ ಭಗವಂತನ ದರ್ಶನವಾಯಿತೆಂದು ಅವರು ಕಂಬನಿ ದುಂಬಿದರು.



ಸಂತ ನಾಮದೇವರು

ಯುವಕರಾದ ನಾಮದೇವರು ಕುಲಕಸುಬಾದ ದರ್ಜಿವೃತ್ತಿಯನ್ನು ಅನುಸರಿಸಲಿಲ್ಲ. ಅಷ್ಟೇ ಅಲ್ಲ. ಎಲ್ಲಾ ಪ್ರಾಪಂಚಿಕ ಕಾರ್ಯಗಳೂ ಅವರಿಗೆ ನೀರಸವಾಗಿ ಕಂಡವು. ಕೈಗೇನು ಸಿಗುವುದೋ ಅದನ್ನು ದಾನವಾಗಿ ಕೊಟ್ಟುಬಿಡುತ್ತಿದ್ದರು. ಇದರಿಂದ ದಾಮಾಜಿಗೆ ಸಂತೋಷವಾದರೂ ತಾಯಿ ಸಹಿಸದಾದಳು. ಕಾಲಾಂತರದಲ್ಲಿ, ದಾಮಾಜಿಯು ನಿಧನರಾಗಲು ತಾಯಿಯ ಕಷ್ಟ ನೋಡಲಾರದೆ, ರಾಜಾಯಿಬಾಯಿ ಎಂಬ ಕನ್ಯೆಯನ್ನು ಮದುವೆಯಾದರು. ಅವಳಾದರೊ ಅತ್ತೆಯ ಅನುಯಾಯಿಯಾದಳು! ಅತ್ತೆ, ಸೊಸೆ ಇಬ್ಬರೂ ನಾಮದೇವರನ್ನು ಪ್ರಪಂಚದ ದಾರಿಗೆ ಎಳೆಯಲೆತ್ನಿಸಿದರು. ನಾಮದೇವರೂ ವಿಚಲಿತರಾಗದೆ, ಸದಾ ಭಗವಂತನ ಚಿಂತೆ ಮಾಡುತ್ತ ದೇವಸ್ಥಾನದಲ್ಲಿ ಕಾಲ ಕಳೆಯುತ್ತಿದ್ದರು. ಕೆಲವೊಮ್ಮೆ, ಭಕ್ತರನ್ನು ಮನೆಗೆ ಕರೆತಂದು ಭೋಜನ ಮಾಡಿಸಿ ಸತ್ಕರಿಸುತ್ತಿದ್ದರು.

ಇದರಿಂದ ಹೌಹಾರಿದ ತಾಯಿ, ಮಗನನ್ನು ಹೇಗಾದರೂ ಮಾಡಿ ಪ್ರಪಂಚದತ್ತ ಸೆಳೆಯಲು ಧನಿಕನೋರ್ವನಿಂದ ಒಂದು

ಸಾವಿರ ರೂಪಾಯಿಗಳನ್ನು ಸಾಲತಂದು ಮಗನ ಕೈಗಿಟ್ಟು, ಯಾವುದಾದರೂ ಒಂದು "ಅವಿನಾಶಕಾರಿ ವ್ಯವಹಾರ"ದಲ್ಲಿ ತೊಡಗಿಸಲು ಹೇಳಿದಳು. ಆದರೆ ನಾಮದೇವರು ಅದನ್ನು ಅರ್ಥಮಾಡಿಕೊಂಡ ರೀತಿಯೇ ಬೇರೆ. ಬಟ್ಟೆ ತಂದು ಮಾರೋಣವೆಂದರೆ, ಅದು ನಾಶಕಾರಿಯಾದುದು. ಮಾನವಸೇವೆಯೇ ಅವರಿಗೆ ಉತ್ತಮವಾದ ಹೂಡಿಕೆಯಾಗಿ ಕಂಡಿತು! ಸರಿ, ಊರಿನ ಎಲ್ಲಾ ಬಡವರು ಮತ್ತು ಆರ್ತರಿಗೆ, ಜಾತಿಭೇದವಿಲ್ಲದೆ, ಔತಣ ನೀಡಿದರು. ಅತಿಥಿಗಳು ಬಂದು ಆನಂದದಿಂದ ಭೋಜನ ಮಾಡುತ್ತಿರುವಾಗ ನಾಮದೇವರು, ಅವರಿಗೆ ಶಾಸ್ತ್ರದ ಆದೇಶಗಳನ್ನು ಪಾಲಿಸಿ ಋಜು ಜೀವನ ನಡೆಸುವಂತೆ ಉಪದೇಶಿಸುತ್ತಿದ್ದರು. ಐದೇ ದಿನಗಳಲ್ಲಿ ಬಹಳಷ್ಟು ನಿರ್ಗತಿಕ ಜನರು ಸಹಾಯ ಹೊಂದಿದರು; ಇನ್ನೂ ಕೆಲವರು ಪಡೆಯುವವರಿದ್ದರು. ಆದರೆ, ನಾಮದೇವರು ಈ ರೀತಿ ತನ್ನ ಹಣವನ್ನು 'ದುರುಪಯೋಗ' ಮಾಡುವುದನ್ನು ಸಹಿಸದಾದ, ಸಾಲಕೊಟ್ಟ ಧನಿಕ ಈ ಯೋಜನೆಗೆ ತಡೆ ಹಾಕಿದನು. ಸತ್ಕಾರ್ಯ ಅರ್ಧಕ್ಕೇ ನಿಂತಿತು. ಮಾನವರ ಕಷ್ಟಗಳ ಬಗ್ಗೆ ನಾಮದೇವರು ತೀವ್ರ ಆಘಾತ ಹೊಂದಿದರು. ಅಳುತ್ತಾ ಭಗವಂತನಲ್ಲಿ ಮೊರೆಯಿಟ್ಟರು: "ದೇವರೆ! ನಿನ್ನ ಮಕ್ಕಳು ಕಷ್ಟದಲ್ಲಿದ್ದಾರೆ, ಅವರನ್ನು ರಕ್ಷಿಸು." ಭಗವಂತ ವಿಠಲ ಅವರಿಗೆ ಕಾಣಿಸಿಕೊಂಡು ಹೇಳಿದನು: "ಎಲ್ಲರೂ ನನ್ನ ಅಂಶದವರೆ ಆಗಿರುವುದರಿಂದ, ನಿಜಾರ್ಥದಲ್ಲಿ ಯಾರೂ ಕಷ್ಟ ಪಡುತ್ತಿಲ್ಲ. ನಾನೇ ಕಷ್ಟಪಡುತ್ತಿದ್ದೇನೆ." ಈ ದೇವನುಡಿ ನಾಮದೇವರಿಗೆ ಸಮಾಧಾನವೀಯಲಿಲ್ಲ. ವಿಠಲ ಮತ್ತೂ ಹೇಳಿದ: "ಮಧ್ಯಾಹ್ನದಲ್ಲಿ ತಲೆಯಮೇಲೆ ಸೂರ್ಯ ಪ್ರಖರಿಸುತ್ತಿರುವಾಗ, ಯಾರು ಕಿರಣಗಳನ್ನು ಸೂರ್ಯಮಂಡಲದಿಂದ ಪ್ರತ್ಯೇಕಿಸಬಲ್ಲರು? ನೀನು ಕಿರಣ ಇದ್ದಂತೆ. ನನ್ನಿಂದ ನಿನ್ನನ್ನು ಯಾರು ಅಗಲಿಸಬಲ್ಲರು?"

ಇದರಿಂದ ಭಗವಂತನು ನಾಮದೇವರ ಭಕ್ತಿಯನ್ನು ಜ್ಞಾನದಲ್ಲಿ ಚಿರಸ್ಥಾಯಿಗೊಳಿಸಲು ಇಚ್ಛಿಸಿದನು—ಎಂದು ತೋರುತ್ತದೆ. ಆದರೆ ನಾಮದೇವರು ತಮ್ಮ ಹಳೇ ಭಾವದಲ್ಲಿಯೇ ಉತ್ತರಿಸಿದರು: "ನನಗೆ ನೀನು ದೇವ. ನಾನು ನಿನ್ನ ಸೇವಕ." ಇದಕ್ಕೆ ಭಗವಂತ ಏನೂ ಹೇಳದಿದ್ದರೂ, ಮುಂದೆ ಸಂತ ಜ್ಞಾನೇಶ್ವರರು (ವಿವೇಕ ಪ್ರಭ, ಆಗಸ್ಟ್, ೨೦೦೨ರ ಸಂಚಿಕೆ ನೋಡಿ.) ಉತ್ತರ ಭಾರತದ ತೀರ್ಥ ಯಾತ್ರೆ ಹೊರಟುನಿಂತಾಗ, ಅವರ ಸಹವಾಸದಲ್ಲಿ ಯಾದರೂ ನಾಮದೇವರ ಜ್ಞಾನಬುದ್ಧಿ ಬೆಳೆಯಬಹುದೆಂಬ ನಿರೀಕ್ಷೆಯಿಂದ, ಅವರು ನಾಮದೇವರನ್ನು ಕರೆದುಕೊಂಡು ಹೋಗಲು ಪ್ರೇರೇಪಿಸಿದನೆಂದು ಒಂದು ನಂಬಿಕೆ ಇದೆ.

ನಾಮದೇವರು ಜ್ಞಾನೇಶ್ವರರ ಆಹ್ವಾನದಿಂದ ಸಂತೋಷಗೊಂಡರೂ, ಅವರ ಜೀವನವು ವಿಠಲನ ದೇವಸ್ಥಾನದ ಆವರಣದಲ್ಲಿಯೆ ಕೇಂದ್ರೀಕೃತವಾಗಿದ್ದರಿಂದ, ಹೊರಗೆ ಹೋಗಲು ಇಚ್ಛಿಸಲಿಲ್ಲ. ಜ್ಞಾನೇಶ್ವರರಿಗೆ ಹಾಗೆಯೇ ತಿಳಿಸಿದರು. ಆದರೆ ಆ ವೇಳೆಗೆ ಒಂದು ದೈವವಾಣಿಯಾಗಿ ಅವರ ಜೊತೆ ಹೋಗಲು ತಿಳಿಸಿತು. ಮನಸ್ಸಿಲ್ಲದ ಮನಸ್ಸಿನಿಂದ ಹೊರಟ ನಾಮದೇವರು, ಮಾರ್ಗದಲ್ಲಿ ಬಾರಿಬಾರಿಗೂ ತಿರುಗಿ ನೋಡುತ್ತಾ, ದುಃಖಿತರಾಗಿ "ಒಂದೊಂದು ಹೆಜ್ಜೆಯೂ ನನ್ನನ್ನು ನಿನ್ನಿಂದ ದೂರ ಮಾಡುತ್ತಿದೆ, ದೇವಾ!" ಎಂದು ಹಲುಬಿದರು. "ನೀನಿಲ್ಲದ ಈ ಪರ್ವತಗಳು, ನದಿ, ತೊರೆಗಳು, ವೃಕ್ಷಗಳು, ಆಕಾಶದಲ್ಲಿನ ನಕ್ಷತ್ರಗಳು ಎಲ್ಲವೂ ನೀರಸವಾಗಿವೆ!" ಮತ್ತು ಜ್ಞಾನೇಶ್ವರರಿಗೆ ಬಾಲಕನಂತೆ ದೂರಿದರು: "ಈ ಮೊದಲು ವಿಠಲನು ತನ್ನನ್ನು ಪ್ರೀತಿಸಲು ನನಗೆ ಕಲಿಸಿದನು. ಆದರೆ ಈಗ ನೋಡಿ, ನನ್ನನ್ನು ದೂರ ಅಟ್ಟಿ, ನರಳಿ, ಸಾಯುವಂತೆ ಮಾಡಿದ್ದಾನೆ!"

ಜ್ಞಾನೇಶ್ವರರು ಅವರನ್ನು ಸಮಾಧಾನ ಪಡಿಸುತ್ತಾ ಹೇಳಿದರು: "ಅದು ಹಾಗಲ್ಲ, ಭಗವಂತನಿಗೆ ತನ್ನ ಭಕ್ತನನ್ನು ದೂರ ಕಳಿಸಿ ತೊಂದರೆ ಕೊಡುವ ಉದ್ದೇಶವಿಲ್ಲ. ನೀವು ಹಿಂದಿರುಗಿ ಬಂದು ಪುನಃ ಅವನನ್ನು ಭೇಟಿಯಾದಾಗ, ಅದಾಗಲೆ ತುಂಬ ಜನರಿಗೆ ದೈವೀ ಉನ್ಮಾದವನ್ನು ತರಿಸಿರುತ್ತೀರಿ; ಬನ್ನಿ, ನಾವು ಹೋದೆಡೆಯಲ್ಲೆಲ್ಲಾ ಹಾಡಿ, ನರ್ತಿಸುತ್ತಾ, ಭಕ್ತಿಪಥವನ್ನು ಪ್ರಸರಿಸೋಣ." ಆದರೂ, ಇನ್ನೂ ಕಂಬನಿ ಸುರಿಸುತ್ತಾ ನಾಮದೇವರು ನುಡಿದರು: "ನನ್ನನ್ನು ಕಳಿಸುವುದರ ಮೂಲಕ ಆತ ನನ್ನನ್ನೇ ತ್ಯಜಿಸಿದ್ದಾನೆ!" ಜ್ಞಾನೇಶ್ವರರಿಗೂ ಸಹನೆ ಮೀರಿತು. ಬೇಸರದಿಂದ ಹೇಳಿದರು: "ಹಾಗಾದರೆ, ಆತ ನನ್ನನ್ನೂ ತ್ಯಜಿಸಿದ್ದಾನೆ!" ನಾಮದೇವರು, "ಇಲ್ಲ, ಅದು ಹಾಗಲ್ಲ; ನೀವು ಭಗವಂತನನ್ನು ಹೃದಯ ಮಂದಿರದಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದೀರಿ. ನೀವೆಲ್ಲಿದ್ದರೂ ಅದು ನಿಮಗೆ ಒಂದೇ" ಎಂದರು. ಈಗ ಜ್ಞಾನೇಶ್ವರರು ಪ್ರಶ್ನಿಸಿದರು: "ಹಾಗಾದರೆ, ನೀವು ಆತನನ್ನು ಸಾಕ್ಷಾತ್ಕರಿಸಿಕೊಳ್ಳಲು ಯಾವುದರ ಅಡ್ಡಿಯಿದೆ? ನಿಮ್ಮ ಹೃದಯಮಂದಿರದಲ್ಲಿ ಭಗವಂತ ಯಾವಾಗಲೂ ಕುಳಿತಿರುತ್ತಾನೆ." ನಾಮದೇವರಿಗೆ ಇದು ಹೆಚ್ಚಾಯಿತು. ಗೋಳಾಡುತ್ತಾ ಬೇಡಿದರು: "ದಯವಿಟ್ಟು, ಹಾಗೆ ಮತ್ತೆ ಹೇಳಬೇಡಿ; ಅವನನ್ನು ಬಿಟ್ಟುಬಿಡಿ. ಬೇಡಿಕೊಳ್ಳುತ್ತೇನೆ, ಸ್ವಾಮಿ, ಅವನನ್ನು ನನಗೆ ಮಾತ್ರ ಬಿಡಿ."

ಸ್ವಲ್ಪ ಕಾಲದಲ್ಲಿ, ಎಲ್ಲರೂ ಹಸ್ತಿನಾಪುರಕ್ಕೆ (ಈಗಿನ ದೆಹಲಿ) ಬಂದು, ಅಲ್ಲಿ ಬಹಳ ಕಾಲ ಇದ್ದರು. ಪ್ರತಿ ರಾತ್ರಿ ಗೊತ್ತುಪಡಿಸಿದ ಮನೆಯೊಂದರಲ್ಲಿ ನಾಮಸಂಕೀರ್ತನೆಗಳು ನಡೆದವು. ಬಹಳ ಜನ ಭಕ್ತರು ಅದರಲ್ಲಿ ಭಾಗವಹಿಸುತ್ತಿದ್ದರು. ನಾಮದೇವರು ವಿಠಲನ ನಾಮ ಹೇಳಿಕೊಡುತ್ತಿದ್ದರು. ಭಕ್ತರು ಅದನ್ನು ಉಚ್ಚರಿಸುತ್ತಾ ಸಂಕೀರ್ತನೆ ಮಾಡುತ್ತಿದ್ದರು. ಇಡೀ ಪ್ರದೇಶವೇ ಅಧ್ಯಾತ್ಮತರಂಗ ತಾಡನದಿಂದ ಕಂಪಿಸುವಂತೆ ಭಾಸವಾಗುತ್ತಿತ್ತು.

ಒಮ್ಮೆ, ಯಾತ್ರಿಕರೆಲ್ಲರೂ ಮೇವಾರದ ಬೆಂಗಾಡಿನಲ್ಲಿ ಬಾಯಾರಿ ಬಸವಳಿದು ಪ್ರಯಾಣಮಾಡುತ್ತಿದ್ದಾಗ, ದೂರದಲ್ಲೊಂದು ಬಾವಿ ಕಂಡಿತು. ಆದರೆ ಅದು ಬತ್ತಿದ ಬಾವಿ. ನಾಮದೇವರು ಶಾಂತರಾಗಿ ಕುಳಿತು ಭಗವನ್ನಾಮ ಸಂಕೀರ್ತನೆ ಪ್ರಾರಂಭಿಸಿದರು. ಆಶ್ಚರ್ಯ! ಬಾವಿಯ ತಳದಿಂದ ನೀರು ಚಿಮ್ಮಲು ಶುರುವಾಗಿ, ಬರುಬರುತ್ತಾ ನೀರು ಮೇಲೇರ

ತೊಡಗಿತು. ಮೇಲ್ಕಟ್ಟೆಯವರೆಗೆ ಬಂದು ತುಂಬಿ ಕೆಳಗೆ ಹರಿಯಿತು. ಎಲ್ಲರೂ ಆನಂದದಿಂದ ನೀರು ಕುಡಿಯುತ್ತಿದ್ದಾಗ, ಜ್ಞಾನೇಶ್ವರರು ಸಂತಸದಿಂದ ಮೆಚ್ಚುಗೆ ಸೂಚಿಸಿದರು: "ನಾಮದೇವರೆ, ಭಗವಂತನನ್ನು ಅಂಗೈನಲ್ಲೇ ಇಟ್ಟುಕೊಂಡಿರುವಂತೆ ಭಾಸವಾಗುತ್ತಿದೆಯಲ್ಲಾ!" ನಾಮದೇವರು ನಸುನಕ್ಕರು. ಜ್ಞಾನೇಶ್ವರರ ಮಾತು ನಿಜವಾಗಿತ್ತು. ಆದರೆ ನಾಮದೇವರು ಭಗವಂತನು ಪಂಢರಾಪುರದ ದೇವಸ್ಥಾನದ ಆವರಣದಲ್ಲಿಯೇ ನೆಲೆಸಿರುವನೆಂದು ಭಾವಿಸಿದ್ದರು. ಆದ್ದರಿಂದಲೆ ಮರಳಿ ಬರುವ ದಾರಿಯಲ್ಲಿ ಪಂಢರಾಪುರವು ಹತ್ತಿರವಾಗುತ್ತಿದ್ದಂತೆಲ್ಲ ಅವರ ಆನಂದ ತಾರಕಕ್ಕೇರಿತು.

ಅದೋ, ದೂರದಲ್ಲಿ ಪಂಢರಾಪುರವು ಕಾಣುತ್ತಿದೆ! ನಾಮದೇವರಿಗೆ ಇನ್ನು ತಡೆಯಲಾಗಲಿಲ್ಲ. ಓಡೋಡುತ್ತಾ ವಿಠಲನ ಗುಡಿಗೆ ಬಂದು ಗರ್ಭಗೃಹದೊಳಗೆ ಹೋಗಿ ಉದ್ಗರಿಸಿದರು: "ದೇವಾ! ನಾನೆಷ್ಟು ತೀರ್ಥಕ್ಷೇತ್ರಗಳನ್ನು, ದೇವಾಲಯಗಳನ್ನು ನೋಡಿದೆ. ಆದರೆ ಅವೆಲ್ಲವೂ ನಿನ್ನ ಈ ಆಲಯಕ್ಕೆ ಸರಿಸಾಟಿಯಲ್ಲ. ಅಲ್ಲದೆ, ಭೀಮಾನದಿಗೆ ಸರಿಸಮಾನವಾದುದನ್ನು ಕಾಣಲೇ ಇಲ್ಲ. ಯಾವ ದೇವದೇವಿಯರ ವಿಗ್ರಹಗಳನ್ನು ದರ್ಶಿಸಿದರೂ, ನಿನ್ನ ರೂಪವೆ ನನ್ನ ಮನಸ್ಸಿಗೆ ಬಂದು ನನ್ನ ಹೃದಯದಲ್ಲಿ ಮೊದಲನೆಯ ಸ್ಥಾನ ಪಡೆಯುತ್ತಿತ್ತು." ಭಗವಂತನಿಗೆ, ತನ್ನ ಭಕ್ತ ಇನ್ನೂ ಆಳವಾದ ಸಾಕ್ಷಾತ್ಕಾರ ಪಡೆದಿಲ್ಲವೆನ್ನಿಸಿರಬಹುದು. ದೇವವಿಗ್ರಹವನ್ನಲಂಕರಿಸಿದ ಹಾರಗಳಲ್ಲಿ ಒಂದು ತಾನಾಗೇ ಹಾರಿಬಂದು ನಾಮದೇವರ ಕೊರಳಿಗೆ ಬಿತ್ತು. ನಂತರ ದೇವವಾಣಿಯಾಯಿತು: "ಮಗು, ಅನೇಕ ಬಣ್ಣಗಳ ಮತ್ತು ನಾನಾ ತರಹದ ಹೂಗಳಿಂದ ಆದರೆ ಒಂದೇ ದಾರದಿಂದ ಕಟ್ಟಲ್ಪಟ್ಟಿರುವ ಈ ಹಾರವು ನಿನ್ನ ಮನಸ್ಸಿನಲ್ಲಿ ನಾಮರೂಪಾತ್ಮಕವಾದ ಈ ಜಗತ್ತಿನ ಹಿಂದೆ ಮತ್ತು ಅದನ್ನು ಮೀರಿಯೂ ಇರುವ ಚೈತನ್ಯದ ಏಕತೆಯನ್ನು ಜಾಗ್ರತಗೊಳಿಸಲಿ."

ವರ್ಷಗಳುರುಳಿದಂತೆ, ನಾಮದೇವರ ತೀವ್ರ ಭಾವುಕತೆ ಕಡಿಮೆಯಾಗುತ್ತಾ ಬಂದು ಕೊನೆಗೆ ತಾವು ಈವರೆಗೆ ದೃಢವಾಗಿ ಅಂಟಿಕೊಂಡಿದ್ದ, ಭಗವಂತ ಪಾಂಡುರಂಗ ವಿಠಲನನ್ನು ಎಲ್ಲೆಡೆಯಲ್ಲಿಯೂ ಮತ್ತು ಎಲ್ಲದರಲ್ಲಿಯೂ ಕಾಣತೊಡಗಿದರು. ಇದಕ್ಕೂ ಒಂದು ಐತಿಹ್ಯವಿದೆ.

ಒಮ್ಮೆ, ಪಾಂಡುರಂಗನ ಸಮಕಾಲೀನ ವಿಶೇಷ ಭಕ್ತರಾದ ಕುಂಬಾರ ಗೋರಾ ಜ್ಞಾನದೇವರನ್ನು, ನಾಮದೇವರನ್ನು ಹಾಗೂ ಇತರ ಕೆಲವು ಭಕ್ತರನ್ನು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದರು. ಅತಿಥಿಗಳು ಭೋಜನ ಮಾಡುತ್ತಿರುವಾಗ, ಹರಿನಾಮ ಸಂಕೀರ್ತನೆ ಮಾಡಿ ಅವರನ್ನು ಆನಂದಗೊಳಿಸಿದರು. ಭೋಜನಾನಂತರದಲ್ಲಿ ಜ್ಞಾನೇಶ್ವರರು ಹೇಳಿದರು: "ಗೋರಾ, ನೀವು ಮಡಕೆ ತಯಾರಿಸುವುದರಲ್ಲಿ ಸಿದ್ಧಹಸ್ತರು. ನಿಮ್ಮ ಮಡಕೆಗಳು ಅತ್ಯುತ್ತಮವಾಗಿರುವುದಲ್ಲದೆ, ನಿಮ್ಮದೇ ಆದ ವಿಶೇಷತೆಯಿಂದಾಗಿ, ಯಾವ ಮಡಕೆ ಸರಿಯಾಗಿ ಬೆಂದಿದೆ ಮತ್ತು ಅರೆಬೆಂದಿದೆ ಎಂಬುದನ್ನು ತಿಳಿಯಬಲ್ಲಿರಿ. ಈಗೊಂದು ಕೆಲಸ ಮಾಡಿ—ನೀವು ನೋಡುತ್ತಿರುವಿರಲ್ಲ, ಎದುರಿರುವ ಮಾನವ ಮಡಕೆಗಳನ್ನು! ಅವುಗಳನ್ನು ಪರೀಕ್ಷಿಸಿ, ಯಾವುವು ಪೂರ್ತಿ ಬೆಂದಿದೆ ಮತ್ತು ಅರೆಬೆಂದಿದೆ ಎಂದು ತಿಳಿಸಿ." "ಎಲ್ಲಾದರೂ ಉಂಟೆ!" ವಿನೀತರಾದ ಗೋರಾ ಕೈಮುಗಿದು ಹೇಳಿದರು, ತಮ್ಮಿಂದ ಸಾಧ್ಯವಿಲ್ಲವೆಂದು. ಆದರೆ ಜ್ಞಾನೇಶ್ವರರು ಪರೀಕ್ಷೆಯಾಗಲೇಬೇಕೆಂದು ಹಠ ಹಿಡಿದರು.

ನಿರುಪಾಯರಾಗಿ, ಗೋರಾ, ತಾವು ಮಡಕೆಗಳನ್ನು ಪರೀಕ್ಷಿಸುವ ಒಂದು ಸಣ್ಣ ಬೆತ್ತವನ್ನು ತಂದು ಸಾಲಾಗಿ ಕುಳಿತಿದ್ದ ಅತಿಥಿಗಳ ತಲೆಯಮೇಲೆ ಒಂದೊಂದು ಬಾರಿ ಮೃದುವಾಗಿ ಬಡಿಯುತ್ತಾ, "ಸರಿ, ಸರಿ" ಎನ್ನುತ್ತಿದ್ದರು. ಎಲ್ಲವೂ ಸರಿಯಾಗಿಯೇ ನಡೆಯಿತು. ಆದರೆ ನಾಮದೇವರನ್ನು ಪರೀಕ್ಷಿಸಿದ ನಂತರ ಗೋರಾ ಹೇಳಿದರು: "ಜ್ಞಾನೇಶ್ವರರೆ, ನನ್ನ ಬೆತ್ತ ಇದೊಂದೆ ಮಡಕೆ 'ಅರೆ ಬೆಂದಿದೆ' ಎಂದು ನಿರ್ಧರಿಸಿದೆ. ಇದಕ್ಕೆ ಇನ್ನೂ ಸ್ವಲ್ಪ ಕಾವು ಕೊಡಬೇಕು; ನಂತರ ಇದು ಎಲ್ಲದರಕ್ಕಿಂತಲೂ ಉತ್ತಮ ಮಡಕೆಯಾಗುವುದರಲ್ಲಿ ಸಂದೇಹವಿಲ್ಲ."

ಈ ಮರ್ಮಾಘಾತಕವಾದ ಮಾತು ಮತ್ತು ನಂತರ ಅತಿಥಿಗಳ ಬಾಯಿಂದ ಹೊರಟ "ಘಳ್ಳೆಂಬ" ನಗು, ನಾಮದೇವರ ಮನಸ್ಸಿಗೆ ತೀವ್ರ ಘಾಸಿಯುಂಟುಮಾಡಿ ಅವರನ್ನು ಪಾತಾಳಕ್ಕೆ ತಳ್ಳಿದಂತಾಯಿತು. ಪಾಂಡುರಂಗ ವಿಠಲನ ಪರಮಭಕ್ತನಿಗೆ ಎಂತಹ ಅವಮಾನ! ಸಮಾರಂಭ ಮುಗಿಯುವವರೆಗೂ ಹೇಗೊ ತಾಳಿಕೊಂಡ ಅವರು, ನಂತರ ವಿಠಲನ ಗುಡಿಗೆ ಓಡಿಹೋಗಿ, ದೇವವಿಗ್ರಹದ ಕಾಲಿಗೆ ಬಿದ್ದು ಅಳುತ್ತಾ ತಾವು ಮಾಡಿದ ಅಪರಾಧವಾದರೂ ಏನೆಂದು ಕೇಳಿದರು. ದೀರ್ಘಕಾಲದ ಮೌನದ ನಂತರ ದೇವವಾಣಿ ಕೇಳಿಸಿತು: "ಮಗು, ನಾಮದೇವ! ಈ ಹಿಂದೆಯೇ ನಾನು ಸೂರ್ಯನೆಂದು ಮತ್ತು ನೀನು ನನ್ನದೊಂದು ಕಿರಣವೆಂದು ಹೇಳಿದ್ದು ನೆನಪಿನಲ್ಲಿದೆಯೇ? ಅದನ್ನು ನೀನೆಷ್ಟರಮಟ್ಟಿಗೆ ಅರಿತುಕೊಂಡಿರುವೆ ಹೇಳು? ನಿನ್ನಿಂದ ನಾನು ಬೇರೆಯೆಂದು ತಿಳಿದಿದ್ದೇ ಈ ಅಜ್ಞಾನಕ್ಕೆ ಮೂಲಕಾರಣ. ಗೋರಾ ಹೇಳಿದ್ದು ಇದೇ ಕಾರಣದಿಂದ. ದಾಸ್ಯಭಾವ ಒಳ್ಳೆಯದೇನೊ ನಿಜ; ಆದರೆ ಮಗು, ನೀನದನ್ನು ಮೀರುವ ಕಾಲ ಬಂದಿದೆ. ಮಲ್ಲಿಕಾರ್ಜುನ ದೇವಸ್ಥಾನದಲ್ಲಿರುವ ವಿಸೋಬಾನ ಹತ್ತಿರ ಹೋಗು, ಅವನು ನಿನಗೆ ಸರಿಯಾದ ಗುರು." ಯಥಾಪ್ರಕಾರ ನಾಮದೇವರು ಕಂಬನಿಗರಿಯುತ್ತಾ, ತನ್ನ ಭಾವದಲ್ಲಿಯೇ ಇರುತ್ತೇನೆಂದು ಬೇಡಿಕೊಂಡರು. ಆದರೆ ಹೋಗಲೇಬೇಕೆಂದು ಮತ್ತೊಮ್ಮೆ ದೈವಾಜ್ಞೆಯಾಯಿತು.

ಭಾರವಾದ ಹೆಜ್ಜೆಗಳನ್ನಿಡುತ್ತಾ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಬಂದ ಅವರಿಗೆ ಇನ್ನೊಂದು ಆಘಾತ ಕಾದಿತ್ತು. ಜೀರ್ಣಕಾಯರಾದ ವೃದ್ಧ ವಿಸೋಬ ಶಿವಲಿಂಗವೊಂದರ ಮೇಲೆ ಕಾಲುಗಳನ್ನಿಟ್ಟು ಮಲಗಿದ್ದರು! ಎಂತಹ ದೇವಾಪರಾಧ! ಕೋಪಗೊಂಡ ನಾಮದೇವರು, ವೃದ್ಧರ ಕಾಲುಗಳನ್ನು ಒರಟಾಗಿ ಹಿಡಿದೆಳೆದಾಡಿದಾಗ, ವೃದ್ಧರು ಎಚ್ಚೆತ್ತು ಹೇಳಿದರು: "ಅಪ್ಪಾ, ತೀವ್ರ ನಿಶ್ಶಕ್ತಿ